ದಾವಣಗೆರೆ ರಾಜ್ಯ ವಿಮಾ ಆಸ್ಪತ್ರೆ ಕಟ್ಟಡದ ಬಗ್ಗೆ

೧೨. ಶ್ರೀ ಪಂಪಾಪತಿ (ದಾವಣಗೆರೆ).—ಈ ಕೆಳಕಂಡ ಪ್ರಶ್ನೆಗಳನ್ನು ಮಾನ್ಯ ಕಾರ್ಮಿಕ ಮಂತ್ರಿಗಳು ಉತ್ತರಿಸುವರೇ ?

(ಅ) ದಾವಣಗೆರೆ ರಾಜ್ಯ ವಿಮಾ ಆಸ್ಪತ್ರೆಯಲ್ಲಿ ಕಾರ್ಮಿಕರಿಗೆ ಮಿಸಲಾಗಿರುವ ಹಾಸಿಗೆಗಳು ಎಷ್ಟು ? ಕಟ್ಟಡದ ಈಗಿನ ನಿರ್ಮಾಣದ ಹಂತವನ್ನು ತಿಳಿಸಿ

(ಆ) ಒಳ ರೋಗಿಗಳ ಸಂಖ್ಯೆ ರಾಜ್ಯ ವಿಮಾ ಆಸ್ಪತ್ರೆಯಲ್ಲಿ ಎಷ್ಟು ?

(ಇ) ಪ್ರತಿ ತಿಂಗಳು ರಾಜ್ಯ ವಿಮಾ ಸಂಸ್ಥೆಗೆ ಸಲ್ಲಬೇಕಾದ ಪಾವತಿಗಳು ಕಾರ್ಖಾನೆ ಆಡಳಿತ ವರ್ಗ ದವರಿಂದ ಬರದೇ ಇದ್ದ ಪಕ್ಷದಲ್ಲಿ ಸರ್ಕಾರವು ಯಾವ ತರಹ ಕ್ರಮವನ್ನು ಕೈಗೊಳ್ಳುತ್ತದೆ.

ಶ್ರೀ ಅಜೀಜ್ ಸೇಠ್ (ಕಾರ್ಮಿಕ ಮಂತ್ರಿಗಳು).—

(ಅ) ೫೦ ಹಾಸಿಗೆಗಳುಳ್ಳ ರಾಜ್ಯ ವಿಮಾ ಆಸ್ಪತ್ರೆಯ ಕಟ್ಟಡದ ಕಾರ್ಯವು ಆರಂಭವಾಗಿ ಎಲ್ಲಾ ಕಡೆ ಅಡಿಪಾಯ ಮುಗಿದು, ಕೆಲವು ಕಡೆ ಕಟ್ಟಡದ ಮೇಲ್‌ಚ್ಚಾವಣಿವರೆಗೂ ಮುಗಿದಿದೆ.

(ಆ) ಸದರಿ ಆಸ್ಪತ್ರೆಯ ಕಟ್ಟಡದ ನಿರ್ಮಾಣ ಇನ್ನು ಮುಗಿದಿಲ್ಲ, ಒಳ ರೋಗಗಳ ಸಂಖ್ಯೆ ಉದ್ಭವಿಸುವುದಿಲ್ಲ. ಆದಾಗ್ಯೂ ೨೪ ಹಾಸಿಗೆಗಳನ್ನು ಚಿಗಟೇರಿ ಜನರಲ್ ಆಸ್ಪತ್ರೆಯಲ್ಲಿ ವಿಮಾ ಕಾರ್ಮಿಕರಿಗಾಗಿ ಮಿಸಲಾಗಿ ಇಡಲ್ಪಟ್ಟಿದೆ.

(ಇ) ಇದು ರಾಜ್ಯ ವಿಮಾ ಸಂಸ್ಥೆಗೆ (ಇಎಸ್‌ಐಸಿ) ಸೇರಿದೆ. ಇದನ್ನು ರಾಜ್ಯ ವಿಮಾ ಕಾನೂನಿನ ೧೯೪೮ರ ಪ್ರಕಾರ ಅಸ್ತಿತ್ವದ ಮೇಲೆ ಕ್ರಮವನ್ನು ತೆಗೆದುಕೊಳ್ಳುವರು.

ಶ್ರೀ ಅಜೀಜ್‌ಸೇಠ್.—ದಾವಣಗೆರೆಯಲ್ಲಿರುವ ೫೦ ಹಾಸಿಗೆಯುಳ್ಳ ಇ ಎಸ್ ಐ, ಆಸ್ಪತ್ರೆಯ ಕೆಲಸ ಭರದಿಂದ ನಡೆಯುತ್ತಿದ್ದು, ಕೆಲವು ಭಾಗ ಲಿಂಟಲ್ ಲೆವೆಲ್‌ಗೆ ಬಂದಿದೆ, ಕೆಲವು ಭಾಗ ರೂಫ್ ಲೆವೆಲ್‌ಗೂ ಬಂದಿದೆ. ಚಿಗಟೇರಿ ಆಸ್ಪತ್ರೆಯಲ್ಲಿ ಸುಮಾರು ೨೪ ಹಾಸಿಗೆಗಳನ್ನು ಕಾರ್ಮಿಕರಿಗಾಗಿ ರಿಸರ್ವ ಮಾಡಿಟ್ಟಿದ್ದೇವೆ. ೧೯೪೮ನೇ ಆಕ್ಟ ಪ್ರಕಾರ ಕಾರ್ಖಾನೆಯ ಮಾಲೀಕರುಗಳು ಇಎಸ್‌ಐ. ಕಾಂಟ್ರಿಬ್ಯೂಷನ್‌ನ್ನು ಕೊಡದೆ ಇದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಅವಕಾಶ ಇದೆ. ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಂದ ಇದರ ಬಗ್ಗೆ ಮಾಹಿತಿಯನ್ನು ನಾವು ತರಿಸಿಕೊಂಡು ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವಿದೆ. ಒಟ್ಟಿನಲ್ಲಿ ನಮಗೆ ಬೇಕಾಗಿರುವುದು ಈಗಿರುವ ೫೦ ಹಾಸಿಗೆಯುಳ್ಳ ಆಸ್ಪತ್ರೆಯನ್ನು ನೂರು ಹಾಸಿಗೆಯುಳ್ಳ ಆಸ್ಪತ್ರೆಯನ್ನಾಗಿ ಮಾಡಬೇಕು ಮತ್ತು ಒಂದೆರಡು ಡಿಸ್ಪೆನ್ಸರಿಗಳನ್ನೂ ಮಾಡಬೇಕು ಎನ್ನುವುದು. ನಾವು ಇದನ್ನು ಬೋರ್ಡನ ಮುಂದಿಟ್ಟು ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಪಂಪಾಪತಿ.—ಮಾನ್ಯ ಮಂತ್ರಿಗಳು ೫೦ ಹಾಸಿಗೆಯುಳ್ಳ ಆಸ್ಪತ್ರೆಯನ್ನು ನೂರು ಹಾಸಿಗೆಯುಳ್ಳ ಆಸ್ಪತ್ರೆಯನ್ನಾಗಿ ಪರಿವರ್ತನೆ ಮಾಡುತ್ತೇನೆಂದು ಹೇಳಿದ್ದಾರೆ. ಮತ್ತು ಎರಡು ಡಿಸ್ಪೆನ್ಸರಿಗಳನ್ನು ಮಾಡುತ್ತೇವೆಂದು ಹೇಳಿದ್ದಾರೆ ಬಹಳ ಸಂತೋಷ. ಈಗ ಕೆಲವು ಮಾಲೀಕರು ಕಾರ್ಮಿಕರಿಂದ ತೆಗೆದುಕೊಂಡಂಥ ಹಣವನ್ನು ಸರಿಯಾಗಿ ಕೊಡುತ್ತಿಲ್ಲ, ಇವರು ಕಾರ್ಮಿಕರ ಕಾಂಟ್ರಿಬ್ಯೂಷನ್‌ನ್ನು ಕೊಡದೇ ಇರುವುದರಿಂದ ಇವರಿಗೆ ಔಷಧಿ ಕೊಡುವುದು ಕಷ್ಟವಾಗಿದೆ ಈ ರೀತಿಯಾಗಿ ಅನೇಕ ಕಡೆ ಕಾರ್ಮಿಕರಿಗೆ ತೊಂದರೆಯಾಗಿದೆ. ಇಲ್ಲಿಯವರೆಗೂ ತಮ್ಮ ಅಧಿಕಾರಿಗಳು ಈ ವಿಷಯವನ್ನು ತಿಳಿದಿದ್ದರೂ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ. ಇದಕ್ಕೆ ಕಾರಣವೇನು ? ಕಾರ್ಮಿಕರಿಂದ ಪಡೆದಂಥ ಹಣವನ್ನು ಸರಿಯಾಗಿ ಪಾವತಿ ಮಾಡುವಂಥ ವ್ಯವಸ್ಥೆಯನ್ನು ಸರ್ಕಾರದ ವರು ಮಾಡುವರೇ ?

ಶ್ರೀ ಅಜೀಜ್ ಸೇಟ್.—ಈಗ ಮಾನ್ಯ ಸದಸ್ಯರು ಕೇಳುವ ಪ್ರಶ್ನೆ, ಮುಂಖ್ಯ ಪ್ರಶ್ನೆಗೆ ಸಂಬಂಧಪಟ್ಟಿಲ್ಲ. ಇ ಎಸ್ ಐ ಕಾಂಟ್ರಿಬ್ಯೂಷನ್‌ನ್ನು ಮಾಲೀಕರು ಕೊಡಬೇಕಾದ್ದು ತಮಗೂ ಗೊತ್ತಿದೆ. ಯಾರು ಇದನ್ನು ಕೊಡದೆ ಡಿಫಾಲ್ಟರ್ಸ್ ಆಗಿದ್ದಾರೆ ಅಂಥವರ ಮೇಲೆ ಸೆಕ್ಷನ್ ೮೫ರ

ಪ್ರಕಾರ ಕ್ರಮ ತೆಗೆದುಕೊಳ್ಳಲು ಅವಕಾಶವಿವೆ. We have enough powers to prosecute those employers who have become defaulter. There is a provision for giving punishment *i. e.* upto 3 months of imprisonment or a fine upto Rs. 500 ಮಾನ್ಯ ಸದಸ್ಯರು ನೇರವಾಗಿ ಯಾರು ಈ ರೀತಿ ಮಾಡಿದ್ದಾರೆಂದು ಹೇಳಿದರೆ ನಾನು ನಿರ್ದಾಕ್ಷಿಣ್ಯವಾಗಿ ಅವರ ಮೇಲೆ ಕ್ರಮ ತೆಗೆದು ಕೊಳ್ಳುತ್ತೇನೆ.

ಶ್ರೀ ಪಂಪಾಪತಿ.—ಇಲ್ಲಿಯವರೆಗೆ ನಿಮ್ಮ ಅಧಿಕಾರಿಗಳು ಯಾರು ಯಾರು ಡಿಫಾಲ್ಟರ್ಸ್ ಇದಾರೆಂದು ನಿಮ್ಮ ಗಮನಕ್ಕೆ ತರಲಿಲ್ಲವೇ ?

ಶ್ರೀ ಅಜೀಜ್ ಸೇಟ್.—ನಾವು ಅಧಿಕಾರಕ್ಕೆ ಬಂದು ಎರಡು ತಿಂಗಳು ಆಗಿದೆ. ಅದರ ಹಿಂದೆ ಆದದ್ದು ಬೇಡ ಮುಂದೆ ಆಗುವುದನ್ನು ಹೇಳಿ.

ಶ್ರೀ ಪಂಪಾಪತಿ.—ಈಗ ತಾವು ಕಟ್ಟುತ್ತಿರುವ ೫೦ ಹಾಸಿಗೆಯುಳ್ಳ ಆಸ್ಪತ್ರೆಯ ಕೆಲಸ ಯಾವಾಗ ಪೂರ್ತಿ ಆಗುತ್ತದೆ ಎಂದು ಸ್ಪಷ್ಟವಾಗಿ ಹೇಳುವುದಕ್ಕಾಗುತ್ತದೆಯೇ

Sri Azeez Sait.—The work is going on briskly the hon member Sri Pampapathy was also satisfied with the progress of work. He only took me to the area. I will see that it is completed as expeditiously as possible.

ಅಧ್ಯಕ್ಷರು.—ಪ್ರಶ್ನೋತ್ತರ ವೇಳೆ ಮುಗಿಯಿತು. ಈಗ ಕಾಗದ ಪತ್ರಗಳ ಮಂಡನೆ

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳು ಮತ್ತು ಲಿಖಿತ ಉತ್ತರಗಳು

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು).—ಅಧ್ಯಕ್ಷರೇ, ಲಿಖಿತ ಮೂಲಕ ಉತ್ತರಿಸಿದ ಪ್ರಶ್ನೆಗಳ ಮೊದಲನೆಯ ಪಟ್ಟಿಯನ್ನು ಸಭೆಯ ಮುಂದಿಡುತ್ತೇನೆ.

ಈವತ್ತಿನವರೆಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಹೊಂದಿರುವ ಪ್ರಯಾಣಿಕರ ವಾಹನಗಳ ಸಂಖ್ಯೆ.

೧೦. ಶ್ರೀ ಗೋವಿಂದ ಪಿ. ಒಡೆಯರಾಜ್ (ಕಮಲಪುರ) ರಾಜ್ಯ ಸಾರಿಗೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

(ಅ) ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಹೊಂದಿರುವ ವಾಹನಗಳ ಸಂಖ್ಯೆ (ಒಂದು ಸಮರ್ಪಕ ದಿನದವರೆಗೆ)

(ಆ) ರಸ್ತೆ ಸಾರಿಗೆ ಸಂಸ್ಥೆಯು ಸ್ಥಾಪಿಸಿದ ವಿಭಾಗಗಳ ಸಂಖ್ಯೆ

(ಇ) ಪ್ರತಿಯೊಂದು ವಿಭಾಗಕ್ಕೆ ವಿತರಣೆ ಮಾಡಿರುವ ಪ್ರಯಾಣಿಕರ ವಾಹನಗಳ ಸಂಖ್ಯೆ

(ಈ) ಪ್ರತಿಯೊಂದು ವಿಭಾಗಕ್ಕೂ ವಾಹನಗಳನ್ನು ವಿತರಣೆ ಮಾಡುವಾಗ ಅನುಸರಿಸುವ ಅಂಶ.

(ಉ) ಪ್ರಯಾಣಿಕರ ವಾಹನಗಳ ವಿತರಣೆಯು ವಿಷಯದಲ್ಲಿ, ಗುಲ್ಬರ್ಗ, ಬೀದರ್, ರಾಯಚೂರು ಮತ್ತು ಬಳ್ಳಾರಿ ಜಿಲ್ಲೆಗಳನ್ನು ನಿರ್ಲಕ್ಷ ಮಾಡಲಾಗಿದೆಯೇ?

(ಊ) ಹಾಗಿದ್ದಲ್ಲಿ ಈ ಜಿಲ್ಲೆಯು ಪ್ರಯಾಣಿಕರಿಗೆ ಸೌಕರ್ಯ ಒದಗಿಸುವ ವಿಷಯದಲ್ಲಿ ಸರ್ಕಾರವು ತೆಗೆದುಕೊಂಡಿರುವ ನಿವಾರಣ ಕ್ರಮಗಳು.